# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ವಿಜಯಪುರ ಜಿಲ್ಲೆ, ಇಂಡಿ ತಾಲ್ಲೂಕಿನ ಚಡಚಣ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಿರ್ವಹಿಸಲಾದ ಕಾಮಗಾರಿಗಳಲ್ಲಿ ಅವ್ಯವಹಾರವೆಸಗಿದ ಅಧಿಕಾರಿ / ನೌಕರರ ವಿರುದ್ಧ ಶಿಸ್ತು ಕ್ರಮ – ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸುವ ಬಗ್ಗೆ – ಆದೇಶ.

ಓದಲಾಗಿದೆ:-1. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ : Compt/Uplok/BGM-921/ 2018 /PP ದಿನಾಂಕ. 27.09.2018.

2. ಮಾನ್ಯ ಉಪಲೋಕಾಯುಕ್ತರವರ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರಡಿಯಲ್ಲಿ ಸಲ್ಲಿಸಿರುವ ವರದಿ ಸಂಖ್ಯೆ: Compt/Uplok/BGM-921/ 2018 /PP ದಿನಾಂಕ. 17.09.2018.

*****

ಪ್ರಸ್ತಾವನೆ:-

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 27.09.2018ರ ಪತ್ರದ ಜೊತೆ ಮಾನ್ಯ ಉಪಲೋಕಾಯುಕ್ತರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12 (3) ರನ್ವಯ ನೀಡಿರುವ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕಳುಹಿಸುತ್ತಾ, ಮಾನ್ಯ ಉಪಲೋಕಾಯುಕ್ತರವರ ಶಿಫಾರಸ್ಸಿನಂತೆ ಕ್ರಮವಹಿಸಲು ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರು ಲೋಕಾಯುಕ್ತ ಕಾಯ್ದೆ ಕಲಂ 12(3)ರಂತೆ ಸಲ್ಲಿಸಿರುವ ವರದಿ ಹಾಗೂ ಲಗತ್ತಿಸಿರುವ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ಶ್ರೀ ವಿಠಲ್ ಎಸ್. ಬಡಿಗೇರ, ಸಾಕಿನ ಚಡವಣರವರು ಇಂಡಿ ತಾಲ್ಲೂಕಿನಲ್ಲಿರುವ ಚಡಚಣ ಗ್ರಾಮ ಪಂಚಾಯತಿಯ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಇತರೆ ಇಲಾಖೆಯ ಅಧಿಕಾರಿಗಳು MGNREGA ಯೋಜನೆಯ ಅಡಿಯಲ್ಲಿ ನಡೆದ ಕಾಮಗಾರಿಗಳಲ್ಲಿ ಅವ್ಯವಹಾರವೆಸಗಿ ಸರ್ಕಾರಿ ಹಣವನ್ನು ದುರುಪಯೋಗಪಡಿಸಿ ಕೊಂಡಿರುತ್ತಾರೆಂದು ಕರ್ನಾಟಕ ಲೋಕಾಯುಕ್ತ ಕಚೇರಿಗೆ ದೂರನ್ನು ಸಲ್ಲಿಸಿರುತ್ತಾರೆ.

ಸದರಿ ದೂರಿಗೆ ಸಂಬಂಧಿಸಿದಂತೆ ಲೋಕಾಯುಕ್ತ ಕಚೇರಿಯ ತನಿಖಾಧಿಕಾರಿಗಳು ತನಿಖೆ ನಡೆಸಿ ಸಲ್ಲಿಸಿರುವ ದಿನಾಂಕ: 12.09.2012ರ ವರದಿಯಲ್ಲಿ ದೂರಿನಲ್ಲಿನ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿರುವುದಾಗಿ ವರದಿ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ.

ನಂತರ ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಆದೇಶ ದಿನಾಂಕ: 19.10.2012 ಹಾಗೂ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ವಿಜಯಪುರ ರವರ ಆದೇಶ ದಿನಾಂಕ: 30.12.2012ರ ಅನುಸಾರ ವಿಜಯಪುರ ಲೋಕಾಯುಕ್ತ ಪೋಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ 19/2012 ಕಲಂ 13(1)(ಸಿ) ಸಹ ವಾಚಕ 13 (2) ಭ್ರಷ್ಟಾಚಾರ

ಪ್ರತಿಬಂಧಕ ಅಧಿನಿಯಮ 1988 ಹಾಗೂಐ 468, 471, 420 ಸ/ಕ 34 ಐಪಿಸಿ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಈ ಕೆಳಕಂಡ ಆಪಾದಿತರುಗಳ ವಿರುದ್ಧ ತನಿಖೆಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ:-

1. ಶ್ರೀ ಸುರೇಶ್ ಪಿ. ಸಿಂಗೆ, ಕಾರ್ಯದರ್ಶಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಚಡಚಣ ಗ್ರಾಮ ಪಂಚಾಯತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ.
2. ಶ್ರೀ ರಾಮಗೊಂಡಪ್ಪ ಬಾಪೂರಾಯ, ಬಿರಾದಾರ್ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಚಡಚಣ ಗ್ರಾಮ ಪಂಚಾಯತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ.
3. ಶ್ರೀ ಸುರೇಶ್ ಶಂಕ್ರಪ್ಪ ಜಂಗಲಗಿ, ಹಿಂದಿನ ಅಧ್ಯಕ್ಷರು, ಚಡಚಣ ಗ್ರಾಮ ಪಂಚಾಯತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ.
4. ಶ್ರೀ ಚಂದಕ್ಕ ಗಂಡ ನಾಮದೇವ ಚವ್ಹಾಣ, ಹಿಂದಿನ ಅಧ್ಯಕ್ಷರು, ಚಡಚಣ ಗ್ರಾಮ ಪಂಚಾಯತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ.
5. ಶ್ರೀ ಬಸಣ್ಣ ತಂದೆ ಚಂದ್ರಾಮ ಬಬಲಾದ್, ಸಹಾಯಕ ಕೃಷಿ ಅಧಿಕಾರಿ, ಹೊರ್ತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ.
6. ಶ್ರೀ ರಾಮಚಂದ್ರ ಕಾಸಣ್ಣ ಅಂಬಿಗೇರ, ಸಹಾಯಕ ಕೃಷಿ ಅಧಿಕಾರಿ, ಉಮರಜ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ.
7. ಶ್ರೀ ಸಂಗಪ್ಪ ಡಿ ಐ ಹೊಳ್ಳಿ, ಕೃಷಿ ಸಹಾಯಕ ಚಡಚಣ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ
8. ಶ್ರೀ ಶಿವಶಂಕರ ಸಿದ್ಧಪ್ಪ ಬಿರಾದಾರ್, ಸಹಾಯಕ ಇಂಜಿನಿಯರ್, ಪಂ.ರಾ.ಇಂ.ಉಪ ವಿಭಾಗ, ಇಂಡಿ
9. ಶ್ರೀ ಶಿವಪುತ್ರಪ್ಪ ಭಾಗಪ್ಪ ಬಾಣಿ, ಕಿರಿಯ ಇಂಜಿನಿಯರ್, ಪಂ.ರಾ.ಇಂ.ಉಪ ವಿಭಾಗ, ಇಂಡಿ.

ತನಿಖಾಧಿಕಾರಿಗಳು 2009-10ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳ ಸ್ಥಳಪರಿಶೀಲನೆಯನ್ನು ಶ್ರೀ ಎ.ಎ.ತೇಲಸಂಗ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪ ವಿಭಾಗ, ನರಗುಂದ ಇವರಿಂದ, 2010-11ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳ ಸ್ಥಳಪರಿಶೀಲನೆಯನ್ನು ಶ್ರೀ ಕೆ.ಎ.ಒಡೆಯರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪ ವಿಭಾಗ, ಶಿರಹಟ್ಟಿ ಇವರಿಂದ ಹಾಗೂ 2011-12ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳ ಬಗ್ಗೆ ಶ್ರೀ ಎಂ.ಬಿ.ದಾನರೆಡ್ಡಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪ ವಿಭಾಗ, ರೋಣ ರವರುಗಳಿಂದ ನಡೆಸಿ ಪಡೆಯಲಾಗಿರುವ ವರದಿ, ಮೇಲ್ಕಂಡ ತನಿಖಾ ವರದಿ ಹಾಗೂ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಿ, ಈ ಕೆಳಕಂಡಂತೆ ಹಣ ದುರುಪಯೋಗವಾಗಿರುವುದು ಕಂಡುಬರುತ್ತದೆ ಎಂದು ತಿಳಿಸಿರುತ್ತಾರೆ:-

| ವರ್ಷ | ಕೈಗೊಂಡ ಕಾಮಗಾರಿಗಳ ಸಂಖ್ಯೆ | ದುರುಪಯೋಗವಾದ ಮೊತ್ತ |
|---|---|---|
| 2009-10 | 11 | ರೂ. 9,50,346/- |
| 2010-11 | 8 | ರೂ. 2,67,526/- |
| 2011-12 | 22 | ರೂ. 7,10,894/- |

ಮಾನ್ಯ ಉಪ ಲೋಕಾಯುಕ್ತರವರು ತನಿಖಾ ವರದಿ, ಆಪಾದಿತ ಅಧಿಕಾರಿ / ನೌಕರರು ಸಲ್ಲಿಸಿರುವ ಆಕ್ಷೇಪಣೆಗಳು ಮತ್ತು ದಾಖಲಾತಿಗಳನ್ನು ಪರಿಶೀಲಿಸಿದ್ದು, ಪ್ರಕರಣದಲ್ಲಿ ಭಾಗಿಯಾಗಿರುವ 9 ಜನ ಆಪಾದಿತರು ಚಡಚಣ ಗ್ರಾಮ ಪಂಚಾಯತಿ ವತಿಯಿಂದ 2009 – 2010ನೇ ಸಾಲಿನಿಂದ 2011-12ನೇ ಸಾಲಿನವರೆಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಖಾತ್ರಿ ಯೋಜನೆಯಲ್ಲಿ ಕೈಗೊಂಡ 89 ಕಾಮಗಾರಿಗಳ ಪೈಕಿ ಕೆಲವು ಕಾಮಗಾರಿಗಳನ್ನು ಅಪೂರ್ಣ ಹಾಗೂ ಕಳಪೆ ಮಟ್ಟದಿಂದ ಮಾಡಿಸಿದ್ದು, ಕಳಪೆ ಕಾಮಗಾರಿಗಳಿಗೆ ಹೆಚ್ಚುವರಿ ಹಣ ಖರ್ಚು ಹಾಕಿದ್ದಾರೆಂದು, ಫಲಾನುಭವಿಗಳ ಯೋಜನೆಗಳನ್ನು ಪೂರ್ಣಗೊಳಿಸಿರುವುದಾಗಿ ಸುಳ್ಳು ದಾಖಲೆ ಸೃಷ್ಟಿಸಿ ರೂ. 19,28,766/- ಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು, ಕಾಮಗಾರಿಗಳನ್ನು ಮಾಡಿಸದೇ ಇದ್ದರೂ ಸಹ ಸುಳ್ಳು ಅಳತೆಗಳನ್ನು ನಮೂದಿಸಲಾಗಿದೆಯೆಂದು, ಕಾಮಗಾರಿಗಳ ಹೆಚ್ಚಿನ ಕಡತಗಳಲ್ಲಿ ಅಂದಾಜು ಪತ್ರಿಕೆಗಳು ಇರುವುದಿಲ್ಲವೆಂದು, ಕೆಲವೊಂದು ಅಂದಾಜು ಪತ್ರಿಕೆಗಳಿಗೆ ಯಾವುದೇ ಅಧಿಕಾರಿಗಳು ರುಜು ಮಾಡಿರುವುದಿಲ್ಲವೆಂದು, ಕೆಲವೊಂದು ಅಂದಾಜು ಪತ್ರಿಕೆಗಳು ಅಸ್ಪಷ್ಟವಾಗಿರುವುದೆಂದು, ಅಂದಾಜು ಪತ್ರಿಕೆಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಆಗಿದ್ದು, ಈ ಹೆಚ್ಚಿನ ಕಾಮಗಾರಿಗಳನ್ನು ಸಂಬಂಧಿಸಿದ ಫಲಾನುಭವಿಗಳೇ ಸ್ವಂತ ಹಣದಿಂದ ಮಾಡಿಕೊಂಡಿದ್ದು, ನಂತರ ಆಪಾದಿತರು ಈ ಕಾಮಗಾರಿಗಳನ್ನು ನೋಡಿ ಎಲ್ಲಾ ಕಾಮಗಾರಿಗಳನ್ನು ತಾವೇ ಮಾಡಿಸಿದಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆಂದು, 64 ಕೃಷಿ ಹೊಂಡ / ಸಮಪಾತಳ ಕಾಮಗಾರಿಗಳನ್ನು ನಿರ್ಮಾಣ ಮಾಡಿದ ಬಗ್ಗೆ ದಾಖಲೆ ತಯಾರಿಸಿದ್ದು, ಆದರೆ ತನಿಕಾಧಿಕಾರಿಯವರು ಕಾಮಗಾರಿಗಳ ವೀಕ್ಷಣೆ ನಡೆಸಿದ ಸಂದರ್ಭದಲ್ಲಿ ಬಹಳಷ್ಟು ಕಾಮಗಾರಿಗಳಲ್ಲಿ ಕೃಷಿ ಹೊಂಡ / ಸಮಪಾತಳ ನಿರ್ಮಾಣ ಮಾಡದಿರುವುದು ಕಂಡು ಬಂದಿದೆಯೆಂದು ಹಾಗೂ ಇನ್ನಿತರ ಅವ್ಯವಹಾರಗಳನ್ನು ಎಸಗಿ ಆಪಾದಿತರು ಈ ಕೆಳಕಂಡಂತೆ ಹಣ ದುರುಪಯೋಗಕ್ಕೆ ಜವಾಬ್ದಾರರಾಗಿರುತ್ತಾರೆಂದು ತಿಳಿಸಿರುತ್ತಾರೆ:-

| ಕ್ರ. ಸಂ. | ಆಪಾದಿತರ ಹೆಸರು | ದುರುಪಯೋಗಪಡಿಸಿಕೊಂಡಿರುವ ಮೊತ್ತ (ರೂ.ಗಳಲ್ಲಿ) |
|---|---|---|
| 1. | ಶ್ರೀ ಸುರೇಶ್ ಪಿ. ಸಿಂಗೆ, ಕಾರ್ಯದರ್ಶಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಚಡಚಣ ಗ್ರಾಮ ಪಂಚಾಯತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ. | 2,68,766/- |
| 2. | ಶ್ರೀ ರಾಮಗೊಂಡಪ್ಪ ಬಾಪೂರಾಯ, ಬಿರಾದಾರ್ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಚಡಚಣ ಗ್ರಾಮ ಪಂಚಾಯತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ. | 2,00,000/- |
| 3. | ಶ್ರೀ ಸುರೇಶ್ ಶಂಕ್ರಪ್ಪ ಜಂಗಲಗಿ, ಹಿಂದಿನ ಅಧ್ಯಕ್ಷರು, ಚಡಚಣ ಗ್ರಾಮ ಪಂಚಾಯತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ. | 2,50,000/- |
| 4. | ಶ್ರೀ ಚಂದಕ್ಕ ಗಂಡ ನಾಮದೇವ ಚವ್ಹಾಣ, ಹಿಂದಿನ ಅಧ್ಯಕ್ಷರು, ಚಡಚಣ ಗ್ರಾಮ ಪಂಚಾಯತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ. | 1,50,000/- |

| | | |
|---|---|---|
| 5 | ಶ್ರೀ ಬಸಣ್ಣ .ತಂದೆ ಚಂದ್ರಾಮ ಬಬಲಾದ್, ಸಹಾಯಕ ಕೃಷಿ ಅಧಿಕಾರಿ, ಹೊರ್ತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ. | 2,50,000/- |
| 6 | ಶ್ರೀ ರಾಮಚಂದ್ರ ಕಾಸಣ್ಣ ಅಂಬಿಗೇರ, ಸಹಾಯಕ ಕೃಷಿ ಅಧಿಕಾರಿ, ಉಮರಜ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ. | 2,50,000/- |
| 7 | ಶ್ರೀ ಸಂಗಪ್ಪ ಡಿ ಐ ಹೊಳ್ಳಿ, ಕೃಷಿ ಸಹಾಯಕ ಚಡಚಣ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ | 2,00,000/- |
| 8 | ಶ್ರೀ ಶಿವಶಂಕರ ಸಿದ್ಧಪ್ಪ ಬಿರಾದಾರ್, ಸಹಾಯಕ ಇಂಜಿನಿಯರ್, ಪಂ.ರಾ.ಇಂ.ಉಪ ವಿಭಾಗ, ಇಂಡಿ | 2,00,000/- |
| 9 | ಶ್ರೀ ಶಿವಪುತ್ರಪ್ಪ ಭಾಗಪ್ಪ ಬಾಣಿ, ಕಿರಿಯ ಇಂಜಿನಿಯರ್, ಪಂ.ರಾ.ಇಂ.ಉಪ ವಿಭಾಗ, ಇಂಡಿ. | 1,60,000/- |

ಮೇಲಿನ ಕ್ರಮ ಸಂಖ್ಯೆ:7 ರಲ್ಲಿನ ಶ್ರೀ ಸಂಗಪ್ಪ ಡಿ ಐ ಹೊಳ್ಳಿ, ಕೃಷಿ ಸಹಾಯಕ ಚಡಚಣ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ ರವರು ನಿಧನ ಹೊಂದಿರುತ್ತಾರೆಂದು ತಿಳಿಸಿರುತ್ತಾರೆ. ಸದರಿ ತನಿಖಾ ವರದಿಗೆ ಸಂಬಂಧಿಸಿದಂತೆ ಶ್ರೀ ಸುರೇಶ್ ಜಂಗಲಗಿ, ಹಿಂದಿನ ಅಧ್ಯಕ್ಷರು, ಚಡಚಣ ಗ್ರಾಮ ಪಂಚಾಯತಿ ಇವರನ್ನು ಹೊರತುಪಡಿಸಿ ಇನ್ನುಳಿದ ಆಪಾದಿತರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ತಮ್ಮ ವಿರುದ್ಧದ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆಂದು ಹಾಗೂ ಸದರಿ ಆಕ್ಷೇಪಣೆಗಳನ್ನು ಒಪ್ಪಲು ಯಾವುದೇ ಸಕಾರಣಗಳು ಇರುವುದಿಲ್ಲವೆಂದು ತಿಳಿಸುತ್ತಾ, ಪ್ರಕರಣದಲ್ಲಿ ಭಾಗಿಯಾಗಿರುವ ಆಪಾದಿತರುಗಳ ಪೈಕಿ ಶ್ರೀ ಸುರೇಶ್ ಶಂಕ್ರಪ್ಪ ಜಂಗಲಗಿ ಮತ್ತು ಶ್ರೀ ಚಂದಕ್ಕ ಗಂಡ ನಾಮದೇವ ಚವ್ಹಾಣ, ಹಿಂದಿನ ಅಧ್ಯಕ್ಷರುಗಳು ಚಡಚಣ ಗ್ರಾಮ ಪಂಚಾಯತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರುಗಳ ವಿರುದ್ಧದ ಹಣ ದುರುಪಯೋಗದ ಬಗ್ಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯನ್ವಯ ಕ್ರಮವಹಿಸುವಂತೆ ಹಾಗೂ ಇನ್ನುಳಿದ 6 ಆಪಾದಿತರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆ ನಡೆಸಲು ತಮಗೆ ವಹಿಸುವಂತೆ ಮಾನ್ಯ ಉಪ ಲೋಕಾಯುಕ್ತರವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸು, ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಲಾಗಿ, ಪ್ರಕರಣದಲ್ಲಿ ಭಾಗಿಯಾಗಿರುವ ಆಪಾದಿತರು ಚಡಚಣ ಗ್ರಾಮ ಪಂಚಾಯತಿ ವತಿಯಿಂದ 2009–2010ನೇ ಸಾಲಿನಿಂದ 2011–12ನೇ ಸಾಲಿನವರೆಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಖಾತ್ರಿ ಯೋಜನೆಯಲ್ಲಿ ಕೈಗೊಂಡ ಕಾಮಗಾರಿಗಳ ಪೈಕಿ ಕೆಲವು ಕಾಮಗಾರಿಗಳನ್ನು ಅಪೂರ್ಣ ಹಾಗೂ ಕಳಪೆ ಮಟ್ಟದಿಂದ ನಿರ್ವಹಿಸಿರುವುದು,. ಕಳಪೆ ಕಾಮಗಾರಿಗಳಿಗೆ ಹೆಚ್ಚುವರಿ ಹಣ ಖರ್ಚು ಹಾಕಿರುವುದು, ಫಲಾನುಭವಿಗಳ ಯೋಜನೆಗಳನ್ನು ಪೂರ್ಣಗೊಳಿಸಿರುವುದಾಗಿ ಸುಳ್ಳು ದಾಖಲೆ ಸೃಷ್ಟಿಸಿ ಹಣ ದುರುಪಯೋಗಪಡಿಸಿಕೊಂಡಿರುವುದು, ಕಾಮಗಾರಿಗಳನ್ನು ಮಾಡಿಸದೇ ಇದ್ದರೂ ಸಹ ಸುಳ್ಳು ಅಳತೆಗಳನ್ನು ನಮೂದಿಸಿರುವುದು, ಕಾಮಗಾರಿಗಳ ಹೆಚ್ಚಿನ ಕಡತಗಳಲ್ಲಿ ಅಂದಾಜು ಪತ್ರಿಕೆಗಳು ಇಲ್ಲದಿರುವುದು, ಕೆಲವೊಂದು ಅಂದಾಜು ಪತ್ರಿಕೆಗಳಿಗೆ ಯಾವುದೇ ಅಧಿಕಾರಿಗಳು ರುಜು ಮಾಡಿಲ್ಲದಿರುವುದು, ಕೆಲವೊಂದು ಅಂದಾಜು ಪತ್ರಿಕೆಗಳು ಅಸ್ಪಷ್ಟವಾಗಿರುವುದು, ಅಂದಾಜು

ಪತ್ರಿಕೆಗಳಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಆಗಿರುವ ಕಾಮಗಾರಿಗಳನ್ನು ಸಂಬಂಧಿಸಿದ ಫಲಾನುಭವಿಗಳೇ ಸ್ವಂತ ಹಣದಿಂದ ಮಾಡಿಕೊಂಡಿರುವುದನ್ನು ತಾವೇ ಮಾಡಿಸಿದಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಣ ದುರುಪಯೋಗಪಡಿಸಿಕೊಂಡಿರುವುದು, ಹೆಚ್ಚು ಕಾಮಗಾರಿಗಳಲ್ಲಿ ಕೃಷಿ ಹೊಂಡ / ಸಮಪಾತಳ ನಿರ್ಮಾಣ ಮಾಡಿಲ್ಲದಿದ್ದರೂ ಸಹ ಹಣ ಪಾವತಿಸಿರುವುದು ಹಾಗೂ ಇನ್ನಿತರ ಅವ್ಯವಹಾರಗಳನ್ನು ಎಸಗಿರುವುದು ದಾಖಲೆಗಳಿಂದ ಕಂಡುಬರುತ್ತದೆ. ಹಾಗಾಗಿ ಸದರಿ ಆಪಾದಿತರುಗಳು ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ ಹಾಗೂ ಸಂಪೂರ್ಣ ನಿಷ್ಠೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ 3(1) ನ್ನು ಉಲ್ಲಂಘಿಸಿ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಅವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಅವಶ್ಯವಿರುತ್ತದೆ.

ಪ್ರಕರಣದಲ್ಲಿ ಭಾಗಿಯಾಗಿರುವ 8 ಆಪಾದಿತರುವ ಪೈಕಿ ಈ ಕೆಳಕಂಡ ಇಬ್ಬರು ಆಪಾದಿತರು ಕೃಷಿ ಇಲಾಖೆಗೆ ಸೇರಿರುವುದರಿಂದ ಸದರಿಯವರುಗಳ ವಿರುದ್ಧ ಕ್ರಮ ಕೈಗೊಳ್ಳಲು ಮಾನ್ಯ ಲೋಕಾಯುಕ್ತ ಕಚೇರಿಯಿಂದ ಸ್ವೀಕೃತವಾಗಿರುವ ಪ್ರಸ್ತಾವನೆಯ ಪ್ರತಿಯನ್ನು ಕೃಷಿ ಇಲಾಖೆಗೆ ಕಳುಹಿಸಲಾಗುವುದು.

1. ಶ್ರೀ ಬಸಣ್ಣ ತಂದೆ ಚಂದ್ರಾಮ ಬಬಲಾದ್, ಸಹಾಯಕ ಕೃಷಿ ಅಧಿಕಾರಿ, ಹೊರ್ತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ.
2. ಶ್ರೀ ರಾಮಚಂದ್ರ ಕಾಸಣ್ಣ ಅಂಬಿಗೇರ, ಸಹಾಯಕ ಕೃಷಿ ಅಧಿಕಾರಿ, ಉಮರಜ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ.

ಅಲ್ಲದೆ, ಪ್ರಕರಣದಲ್ಲಿ ಭಾಗಿಯಾಗಿರುವ ಶ್ರೀ ಸುರೇಶ್ ಶಂಕ್ರಪ್ಪ ಜಂಗಲಗಿ ಮತ್ತು ಶ್ರೀ ಚಂದಕ್ಕ ಗಂಡ ನಾಮದೇವ ಚವ್ಹಾಣ, ಹಿಂದಿನ ಅಧ್ಯಕ್ಷರುಗಳು ಚಡಚಣ ಗ್ರಾಮ ಪಂಚಾಯತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರುಗಳ ವಿರುದ್ಧದ ಹಣ ದುರುಪಯೋಗದ ಬಗ್ಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯನ್ವಯ ಕ್ರಮವಹಿಸಲು ಲೋಕಾಯುಕ್ತ ಕಚೇರಿಯಿಂದ ಸ್ವೀಕೃತವಾಗಿರುವ ಪ್ರಸ್ತಾವನೆಯ ಪ್ರತಿಯನ್ನು ಸಕ್ಷಮ ಪ್ರಾಧಿಕಾರವಾದ ನಿರ್ದೇಶಕರು (ಗ್ರಾ.ಪಂ.), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಕಳುಹಿಸಲಾಗುವುದು.

ಇನ್ನುಳಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸಿದ 4 ಆಪಾದಿತರುಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11ರಂತೆ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಕೆಳಕಂಡ ಆದೇಶ.

**<u>ಆದೇಶ ಸಂಖ್ಯೆ : ಗ್ರಾಅಪ 91 ಇಎನ್‌ಕ್ಯೂ 2018 ಬೆಂಗಳೂರು, ದಿನಾಂಕ. 16.11.2018</u>**

ಪಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಕೆಳಕಂಡ ನೌಕರರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಂತೆ ನಡೆಸಲು

ಸದರಿ ನಿಯಮಗಳ ನಿಯಮ 14(ಎ)ರ ಅನುಸಾರ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶಿಸಿದೆ :-

1. ಶ್ರೀ ಸುರೇಶ್ ಪಿ. ಸಿಂಗೆ, ಕಾರ್ಯದರ್ಶಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಚಡಚಣ ಗ್ರಾಮ ಪಂಚಾಯತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ.
2. ಶ್ರೀ ರಾಮಗೊಂಡಪ್ಪ ಬಾಹೂರಾಯ, ಬಿರಾದಾರ್ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಚಡಚಣ ಗ್ರಾಮ ಪಂಚಾಯತಿ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ.
3. ಶ್ರೀ ಶಿವಶಂಕರ ಸಿದ್ಧಪ್ಪ ಬಿರಾದಾರ್, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಇಂಡಿ
4. ಶ್ರೀ ಶಿವಪುತ್ರಪ್ಪ ಭಾಗಪ್ಪ ಬಾಣಿ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಇಂಡಿ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

16/11/2018

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು - ಮುಖ ಪತ್ರದೊಂದಿಗೆ
3. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ವಿಜಯಪುರ.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
7. ನಿರ್ದೇಶಕರು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಸಂಬಂಧಪಟ್ಟ ಆಪಾದಿತ ಅಧಿಕಾರಿ / ನೌಕರರಿಗೆ - ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ವಿಜಯಪುರ ಇವರ ಮುಖಾಂತರ.
9. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
10. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ-1) ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
11. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಕಂಪ್ಯೂಟರ್ ಸೆಲ್.